## ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/05/ಇಸಿಎಸ್(1)/2021

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001.
ದೂ. ಸಂ: 080-22200777
e-mail: dte.commissioner@gmail.com
ದಿನಾಂಕ: 04.07.2025.

### ಸುತ್ತೋಲೆ

ವಿಷಯ: 2021-22, 2022-23, 2023-24 ಮತ್ತು 2024-25 ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ABC ID/APAAR ID ನ್ನು ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/01/ಇಪಿಎಸ್/2024, ದಿನಾಂಕ: 23.12.2024.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/05/ಇಸಿಎಸ್(1)/2021, ದಿನಾಂಕ: 25.06.2025.

*-*-*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸುತ್ತೋಲೆಗಳನ್ವಯ 2021-22, 2022-23, 2023-24 ಮತ್ತು 2024-25 ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರಥಮ ಸೆಮಿಸ್ಟರ್/ಲ್ಯಾಟರಲ್ ಎಂಟ್ರಿ ಮುಖಾಂತರ ಮೂರನೇ ಸೆಮಿಸ್ಟರ್‌ಗೆ ಪ್ರವೇಶ ಪಡೆದು ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವ/ಪೂರೈಸಿರುವ ವಿದ್ಯಾರ್ಥಿಗಳ ABC ID/APAAR ID ನ್ನು ಸೃಜಿಸಿ ಬಿಟಿಇ ಲಿಂಕ್ಸ್ ಆನ್ ಲೈನ್ ಪೋರ್ಟಲ್ ಮೂಲಕ ನಮೂನೆಯನ್ನು (Blank format) download ಮಾಡಿಕೊಂಡು, ಸದರಿ ನಮೂನೆಯಲ್ಲಿ ಪೂರ್ಣ ವಿವರಗಳನ್ನು ಭರ್ತಿ ಮಾಡಿ ಬಿಟಿಇ ಲಿಂಕ್ಸ್‌ನಲ್ಲಿ ನೀಡುವ ಮಾರ್ಗಸೂಚಿಗಳನ್ವಯ upload ಮಾಡಲು ತಿಳಿಸಲಾಗಿತ್ತು.

ಆದರೂ ಸಹ ಹಲವು ಸಂಸ್ಥೆಗಳು ಇದುವರೆವಿಗೂ APAAR ID (**Register Number⟶APAAR ID)** ನಮೂನೆಯನ್ನು ಭರ್ತಿ ಮಾಡಿ ಬಿಟಿಇ ಲಿಂಕ್ಸ್‌ನಲ್ಲಿ ಅಪ್‌ಲೋಡ್ ಮಾಡದಿರುವುದು ಕಂಡು ಬಂದಿರುತ್ತದೆ.

ಯಾವುದೇ ವಿದ್ಯಾರ್ಥಿಗಳ APAAR ID ಗಳನ್ನು BTELinx ಮೂಲಕ ಅಪ್‌ಲೋಡ್ ಮಾಡದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು (Marks sheet/Grade Card/Diploma Certificate) NAD /Digilocker Portal ಗೆ ಅಪ್‌ಲೋಡ್ ಮಾಡಲು ಸಾಧ್ಯವಾಗುವುದಿಲ್ಲ.

ಪ್ರಯುಕ್ತ ಸದರಿ ವಿಷಯವನ್ನು "ಅತೀ ಜರೂರು" ಎಂದು ಪರಿಗಣಿಸಿ ಅಗತ್ಯ ತುರ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ತಪ್ಪಿದಲ್ಲಿ, ಮುಂದಿನ ಆಗುಹೋಗುಗಳಿಗೆ/ಕಾನೂನಾತ್ಮಕ ಸಮಸ್ಯೆಗಳಲ್ಲಿ ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರುಗಳೇ ನೇರ ಹೊಣೆಗಾರರೆಂದು ಈ ಮೂಲಕ ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ.

4/7/2025

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.

ಪ್ರತಿ:
1. ಶ್ರೀ ಹರೀಶ ಶೆಟ್ಟಿ, ಪ್ರಾಚಾರ್ಯರು, ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು – ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಆಯುಕ್ತರ ಆಪ್ತಶಾಖೆ.
3. ನಿರ್ದೇಶಕರವರ ಆಪ್ತಶಾಖೆ.